ಕರ್ನಾಟಕ ವಿಧಾನ ಪರಿಷತ್ತು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 206

2. ಸದಸ್ಯರ ಹೆಸರು : ಬಿ.ಕೆ.ಹರಿಪ್ರಸಾದ್

3. ಉತ್ತರಿಸುವ ದಿನಾಂಕ : 14.12.2021

4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	2019-20 ಹಾಗೂ 2020-21 ಮತ್ತು 2021-22ನೇ ಸಾಲಿನಲ್ಲಿ ಖಾಸಗಿ ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರರಿಗೆ ಬಾಕಿ ಪಾವತಿಯಾಗಬೇಕಿರುವ ಮೊತ್ತವೆಷ್ಟು; ಕಾರ್ಖಾನೆವಾರು ಅಂಕಿ ಅಂಶಗಳೊಂದಿಗೆ ಸಂಪೂರ್ಣ ವಿವರ ನೀಡುವುದು:	ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ 2019-20, 2020-21 ಮತ್ತು 2021-22ನೇ ಸಾಲುಗಳಲ್ಲಿ ಪಾವತಿಸಬೇಕಾಗಿರುವ, ಪಾವತಿಸಿರುವ ಮತ್ತು ಬಾಕಿ ಉಳಿಸಿಕೊಂಡಿರುವ ವಿವರಗಳ ಕಾರ್ಖಾನೆವಾರು ಅಂಕಿ ಅಂಶಗಳನ್ನು ವರ್ಷವಾರು **ಅನುಬಂಧ-(1) (2) ಮತ್ತು (3)** ರಲ್ಲಿ ಒದಗಿಸಿದೆ.
(ಆ)	ರೈತರ ಕಬ್ಬಿನ ಬಿಲ್ಲನ್ನು ಬಾಕಿ ಉಳಿಸಿಕೊಂಡಿರುವ ಖಾಸಗಿ ಕಾರ್ಖಾನೆಗಳ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು?	2019-20ನೇ ಹಂಗಾಮಿನಲ್ಲಿ 62 ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವ ಕಾರ್ಯವನ್ನು ನಿರ್ವಹಿಸಿದ್ದು, ಸದರಿ ಸಾಲಿನಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾಗಿದ್ದ ಮೊತ್ತ ರೂ.10,428.96 ಕೋಟಿಗಳಾಗಿರುತ್ತವೆ. ಕೆಲವು ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರವು ನಿಗದಿಪಡಿಸಿದ ಎಫ್.ಆರ್.ಪಿ. ದರಕ್ಕಿಂತ ಅಧಿಕ ದರವನ್ನು ರೈತರಿಗೆ ಪಾವತಿಸಿರುವುದರಿಂದ 2019-20ನೇ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಿದ ಒಟ್ಟು ಮೊತ್ತ ರೂ.10,671.94 ಕೋಟಿಗಳಷ್ಟಾಗಿರುತ್ತದೆ. 2020-21ನೇ ಸಾಲಿನಲ್ಲಿ 64 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸಿದ್ದು, ಈ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಕಬ್ಬು ಬಿಲ್ಲು ಮೊತ್ತವನ್ನು ಪೂರ್ಣವಾಗಿ ತೀರುವಳಿ ಮಾಡಿದ್ದು ರೈತರಿಗೆ ಪಾವತಿಸಬೇಕಾದ ಕಬ್ಬು ಬಿಲ್ಲು ಬಾಕಿ ಇರುವುದಿಲ್ಲ.
		2021-22ನೇ ಹಂಗಾಮು ನವೆಂಬರ್-2021 ರಿಂದ ಪ್ರಾರಂಭವಾಗಿದ್ದು, ಚಾಲ್ತಿಯಲ್ಲಿರುತ್ತದೆ. ಇದುವರೆವಿಗೂ 65 ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಲಾಗಿರುತ್ತದೆ. ಈ ಕಾರ್ಖಾನೆಗಳು ದಿನಾಂಕ:15.11.2021ರವರೆಗೆ ಒಟ್ಟು 112.39 ಲಕ್ಷ ಮೆಟ್ರಿಕ್ ಕಬ್ಬು ನುರಿಸಿ 9.60 ಮೆ.ಟನ್ ಸಕ್ಕರೆ ಉತ್ಪಾದಿಸಿ, ಶೇ.8.54 ರಷ್ಟು ಇಳುವರಿಯನ್ನು ಪಡೆದಿರುತ್ತವೆ. ಈ ಅವಧಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಕಾರ್ಖಾನೆಗಳು ಕೇಂದ್ರ ಸರ್ಕಾರ ನಿಗದಿಪಡಿಸಿರುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯಂತೆ (ಎಫ್.ಆರ್.ಪಿ) ಪಾವತಿಸಬೇಕಾದ ಕಬ್ಬು ಬಿಲ್ಲು ಮೊತ್ತ ರೂ. 3475.53

.......2